ಕರ್ನಾಟಕ ವಿಧಾನ ಸಭೆ

ಗುರುವಾರ 30ನೇ ಮಾರ್ಚ್ 1989

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾ (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಬಿ. ಎಸ್, ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ: ನಾನು ನಿನ್ನೆಯ ದಿವಸ ಒಂದು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದೆ...

(ಗೊಂದಲ)

Mr- SPEAKER-—adjounrment motion...

ಪ್ರಶ್ನೋತ್ತರ ಆದಮೇಲೆ ಇದನ್ನು ತೆಗೆದುಕೊಳ್ಳುತ್ತೇನೆ...

(ಗೊಂದಲ)

Sri M. R. MALIKARJUNA KRORGE.—Sri, our submission is,...

ಅಧ್ಯಕ್ಷರು.—ಕ್ವಶ್ಚನ್ ಹವರ್ ಆದಮೇಲೆ ತೆಗೆದುಕೊಳ್ಳೋಣ. ದಯವಿಟ್ಟು ಈಗ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಅವರು ಕೊಟ್ಟಿರುವುದಕ್ಕೆ ಎಷ್ಟು ಮಹತ್ವ ಇದೆಯೋ ಅಷ್ಟೇ ಮಹತ್ವ ನಾನು ಕೊಟ್ಟಿರುವುದಕ್ಕೆ ಇದೆ.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಕೊಟ್ಟಿದ್ದೀರಿ, ಕ್ವಶ್ಚನ್ ಹವರ್ ಆದಮೇಲೆ...

(ಗೊಂದಲ)

ಅಧ್ಯಕ್ಷರು.—ಯಾರು ಯಾರು ಗಲಾಟೆ ಮಾಡುತ್ತೀರಿ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸಭಾಧ್ಯಕ್ಷರೆ, ಈಗ ಮಾನ್ಯ ಜೀವರಾಜ್ ಆಳ್ವರವರು ಬಂದಿದ್ದಾರೆ. ಅವರಿಗೆ ಸಂಬಂಧಪಟ್ಟಂಥ ವಿಚಾರಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ನೀವು ಕೊಟ್ಟಿರುವುದೂ ಇದೆ, ಅವರು ಕೊಟ್ಟಿರುವುದೂ ಇದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಿಮ್ಮದನ್ನು ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ. ಅವರದನ್ನೂ ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ. ನೀವು ಈರೀತಿ ಮಾಡಿದರೆ ನಾನು ಏನು ಮಾಡುವುದು. ನೀವು ಹೀಗೆಲ್ಲಾ ಮಾಡಿದರೆ ನಿಮ್ಮದನ್ನೂ ತೆಗೆದುಕೊಳ್ಳುವುದಿಲ್ಲ, ಅವರ ವಿಷಯವನ್ನು ತೆಗೆದುಕೊಳ್ಳುವುದಿಲ್ಲ. ನೀವು

ಗಲಾಟೆ ಮಾಡದೇ ಇದ್ದರೆ ನಿಮ್ಮ ಇಬ್ಬರ ಅಡ್ಜರ್ನ್‌ಮೆಂಟ್ ಮೋಷನ್‌ನ್ನೂ ಕ್ವೆಶ್ಚನ್ ಹವರ್ ಆದಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಇದು ಲಕ್ಷಾಂತರ ರೈತರ ಸಮಸ್ಯೆಯಾಗಿದೆ, ನನಗೆ ಚರ್ಚೆ ಮಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಕ್ವೆಶ್ಚನ್ ಹವರ್ ಆದಮೇಲೆ ನಿಮ್ಮ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದು ಕೊಳ್ಳೋಣ.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ನಮಗೂ ಅವಕಾಶ ಕೊಡಿ, ಇಲ್ಲದಿದ್ದರೆ ಈ ಸಭೆಯನ್ನು ನಡೆಸುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಮಾನ್ಯ ಜೀವರಾಜ ಆಳ್ವರವರಿಗೆ ಅಪಾಲಜಿಯನ್ನು ಅವರು ಕೇಳಿಕೊಳ್ಳಬೇಕು.

ಅಧ್ಯಕ್ಷರು.—ಕ್ವೆಶ್ಚನ್ ಹವರ್ ಆದಮೇಲೆ ತೆಗೆದುಕೊಳ್ಳೋಣ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಜೀವರಾಜಆಳ್ವರವರಿಗೆ ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ. ಮಾನ್ಯ ಅಧ್ಯಕ್ಷರೇ ನಾವು ನಿನ್ನೆಯೇ ಅಡ್ಜರ್ನ್‌ಮೆಂಟ್ ಮೋಷನ್‌ಮೇಲೆ ನೋಟೀಸ್ ಕೊಟ್ಟಿದ್ದೇವೆ, ನಮಗೆ ಮಾತನಾಡಲು ಅವಕಾಶವನ್ನು ಕೊಡಿ.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಜೆ. ಹೆಚ್. ಪಟೇಲ್‌ರವರು ಏನು ಹೇಳುತ್ತಾರೆ ಅದನ್ನು ಕೇಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಸಹಕಾರಿ ಸಂಘದ ಸಾಲವನ್ನು ತೀರಿಸಲು ೨೬ನೇ ತಾರೀಖು ಕೊನೆಯ ದಿವಸವೆಂದು ಘೋಷಿಸಿದ್ದಾರೆ.

ಅಧ್ಯಕ್ಷರು.—ನಿಮ್ಮನ್ನೂ ಕೇಳುತ್ತೇನೆ. ಯಡಿಯೂರಪ್ಪನವರೇ. ಎಲ್ಲರನ್ನು ಕೇಳುತ್ತೇನೆ. ಈಗ ಮಾನ್ಯ ಜೆ. ಹೆಚ್. ಪಟೇಲರು ಏನು ಹೇಳುತ್ತಾರೆ ಅದನ್ನು ಕೇಳೋಣ.

ಶ್ರೀ ಜೆ. ಹೆಚ್. ಪಟೇಲ್. ಮಾನ್ಯ ಅಧ್ಯಕ್ಷರೇ ನಿನ್ನೆ ಈ ಸದನವನ್ನು ಮುಂದೂಡಿದಾಗ ಮಾನ್ಯ ಎಂ. ಎಸ್. ಕೃಷ್ಣನ್‌ರವರು, ಮಾನ್ಯ ವೆಂಕಟರಾಮಯ್ಯನವರು, ಮಾನ್ಯ ಯಡಿಯೂರಪ್ಪನವರು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕೊಟ್ಟಿದ್ದರು. ಅದರ ಪ್ರಕಾರವಾಗಿ ನಿನ್ನೆ ಪ್ರಾರಂಭ ಮಾಡಿದರು. ಆದರೆ ಕೃಷ್ಣನ್‌ರವರು ತಮ್ಮ ಮಾತನ್ನು ಕಂಪ್ಲೀಟ್ ಮಾಡಿರಲಿಲ್ಲ. ಈಗ ಅದಾ ಪ್ರಕಾರ ಹೋಗುವುದಕ್ಕೆ ಮುಂಚೆ, ಮಾನ್ಯ ಜೀವರಾಜಆಳ್ವರವರ ಬಗ್ಗೆ ಬಹಳ ಬೇಜವಾಬ್ದಾರಿಯಿಂದ ಏನು ಹೇಳಿಕೆಯನ್ನು ಹೇಳಿದ್ದಾರೆ. ಅದಕ್ಕೋಸ್ಕರ ಮಾನ್ಯ ಅಧ್ಯಕ್ಷರೇ ಮತ್ತೆ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಕೃಷ್ಣನ್‌ರವರ ಸಬ್‌ಮಿಷನ್‌ಗೆ ಅಲೌಮಾಡಿ. ಅದಾದಮೇಲೆ ಮಾನ್ಯ ಜೀವರಾಜ ಆಳ್ವರವರಿಗೆ ಸ್ಪೆಷಲ್ ಎಕ್ಸ್‌ಪ್ಲನೇಷನ್‌ಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ಅವರು ತಮ್ಮ ಅಭಿಪ್ರಾಯವನ್ನು ಹೇಳಿದರು. ಈಗ ನಿಮ್ಮ ಅಭಿಪ್ರಾಯವನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. ಮಾನ್ಯ ಅಧ್ಯಕ್ಷರೇ ನಾನು ಸವಿಸ್ತಾರವಾಗಿ ಹೇಳಬೇಕಾಗಿದೆ. ನಿನ್ನೆ ಗಲಾಟೆಗಳು ಆದಮೇಲೆ ಠಕ್ಕರ್ ಕಮೀಷನ್ ರಿಪೋರ್ಟ್‌ಮೇಲೆ ಡಿಸ್ಕಷನ್ ಮಾಡಬೇಕೆಂದು ಹೇಳಿದ್ದಕ್ಕೆ ನಾವು ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದು ಸದನದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ ಅದನ್ನು ಚರ್ಚೆ ಮಾಡುವುದು ಬೇಡವೆಂದು ಹೇಳಿ ರೂಲ್ ೬೮ ಪ್ರಕಾರ ಸೊಸೈಟಿಗಳಲ್ಲಿ ಏನು ಅವ್ಯವಹಾರ ನಡೆದಿದೆ ಅದನ್ನು ತೆಗೆದುಕೊಳ್ಳೋಣವೆಂದು ಹೇಳಿದ್ದೇವು. ನಿವು ಅದಕ್ಕೆ ಅಲ್ಲಿ ಒಪ್ಪಿಕೊಂಡು ಬಂದಮೇಲೆ ಪುನಃ ಅದೇ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನಿಸಿದರೆ ಸೊಸೈಟಿಗಳ ಅವ್ಯವಹಾರದ ಬಗ್ಗೆ ಚರ್ಚೆ ಮಾಡುವುದನ್ನು ಸ್ಕಟಲ್ ಯಾಡುವುದಕ್ಕೆ ಈರೀತಿ ಮಾಡುತ್ತಿದ್ದೀರಾ ಎಂದು ನಾನು ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅವರ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿರುವುದರಿಂದ ಚರ್ಚೆ ಮಾಡಲು ನಮಗೂ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಿ. ಮಲ್ಲಿಕಾರ್ಜುನ ಖಿರ್ಗೆ.—ಮಾನ್ಯ ಪಟೇಲರು ಹೇಳಿದ ಮೇಲೆ ನಾನು ಹೇಳಬೇಕೇ ಬೇಡವೇ ?

ಅಧ್ಯಕ್ಷರು.—ನಿನ್ನೆ ಮಾತನಾಡಿದಾಗ ನೀವು ಮತ್ತು ಅವರು ಇದ್ದಿರಿ. ಇದು ಓಪನ್ ಸೀಕ್ರೆಟ್. ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿ, ಅದನ್ನು ಮಾಡಿದ ಮೇಲೆ ರೂಲ್ ಸ್ಟ್ರೆಚ್ ಆದರೂ ಮಾಡಿ, ಏನಾದರೂ ಮಾಡಿ ಎಂದು ಹೇಳಿದ್ದಾರೆ. ಪ್ರಿಲಿಮಿನರಿ ಸಬ್‌ಮಿಷನ್ ಮಾಡಬಾರದೆಂದು ನಾನು ಹೇಳಿಲ್ಲ. ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಹಿಂದಿನಿಂದ ಹಲವಾರು ಸಂದರ್ಭಗಳಲ್ಲಿ ಅವಕಾಶ ಕೊಟ್ಟುಕೊಂಡು ಬಂದಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ. ಈಗ ಜೆ. ಹೆಚ್. ಪಟೇಲರು ಹೇಳಿದ್ದಾರೆ, ಅದಕ್ಕೆ ಖಿರ್ಗೆಯವರು ಹೇಳಲಿ. ನಿನ್ನೆ ಚೆಂಬರ್‌ನಲ್ಲಿ ಏನು ತೀರ್ಮಾನವಾಯಿತು ಎಂಬ ಬಗ್ಗೆ ಬೇಕಾದರೆ, ಕೃಷ್ಣನ್, ಸಿಂಧ್ಯ, ರಾಜಪರ್ಧನ್ ಇವರೆಲ್ಲಾ ಇದ್ದರು ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ. ಇವತ್ತು ಸದನದಲ್ಲಿ ಇಟ್ಟಿರುವ ಅಂಜೆಡಾ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಇದೆ ಕೇಳಿ.

ಅಧ್ಯಕ್ಷರು.—ಅವರದ್ದು ಆಗಲಿ, ತಡೆಯಿರಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನದು ಕ್ರಿಯಾಲೋಪ ಇದೆ. ನಾನು ಠಕ್ಕರ್ ಆಯೋಗದ ಬಗ್ಗೆ ಪ್ರಸ್ತಾಪಿಸುವುದಿಲ್ಲ.

ಅಧ್ಯಕ್ಷರು.—ಮೊದಲು ಖಿರ್ಗೆಯವರು ಹೇಳಲಿ, ಆಮೇಲೆ ಕೃಷ್ಣನ್ ಅವರದ್ದು ಮತ್ತು ಯಡಿಯೂರಪ್ಪನವರದ್ದನ್ನು ಕೇಳುತ್ತೇನೆ. ಜೆ. ಹೆಚ್. ಪಟೇಲರು ಹೇಳಿದರು, ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕು. ಅದಕ್ಕೆ ಅವಕಾಶ ಕೊಡಿ ಎಂದು. ಹಿಯರಿಂಗ್ ಆದಮೇಲೆ ನಾನು ಅದನ್ನು ರೂಲ್ ಸ್ಟ್ರೆಚ್ ಮಾಡಬಹುದು ಅಥವಾ ಪರಿವರ್ತನೆ ಮಾಡಬಹುದು ಎಂದು ಹೇಳಿದ್ದೇನೆ. ಈಗ ಖಿರ್ಗೆಯವರು ಹೇಳಲಿ. ನಂತರ ಕೃಷ್ಣನ್‌ರವರು ಹೇಳಲಿ

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಜೆಂಡಾ ಇಟ್ಟಿರುವ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಇದೆ ಕೇಳಿ.

ಅಧ್ಯಕ್ಷರು.—ನೀವು ಮಾತನಾಡುವುದಕ್ಕೆ ಈಗ ಅವಕಾಶ ಇಲ್ಲ.

ಶ್ರೀ ಬಿ ಎಸ್. ಯಡಿಯೂರಪ್ಪ.—ದಯವಿಟ್ಟು ಎರಡು ನಿಮಿಷ ಅವಕಾಶ ಕೊಡಿ ನಾನು ಠಕ್ಕರ ಬಗ್ಗೆ ಪ್ರಸ್ತಾಪಿಸುವುದಿಲ್ಲ. ನನ್ನ ಕ್ರಿಯಾಲೋಪ ಏನೆಂದರೆ, ೨೬ನೇ ತಾರೀಖು ಒಂದು ನಿಲುವಳಿ ಸೂಚನೆಯನ್ನು ಮೂವ್ ಮಾಡಿದೆ. ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಿದಿರಿ ನಾನು ರೈತರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದೆ ಎಂದರೆ ಸಹಕಾರ ಸಂಘಗಳ ಸಾಲ ಕಟ್ಟುವುದಕ್ಕೆ ೨೫ನೇ ತಾರೀಖು ಕೊನೆಯ ದಿನ...

ಅಧ್ಯಕ್ಷರು.—ಇವತ್ತು ೫-೬ ನಿಲುವಳಿ ಸೂಚನೆಗಳು ಇವೆ.

ಶ್ರೀ ಬಿ. ಎಸ್.—ಯಡಿಯೂರಪ್ಪ.—೨೯ನೇ ತಾರೀಖು ವಿಷಯವನ್ನು ತೆಗೆದುಕೊಂಡು ಬಂದರೆ, ಆದರೆ ೩೦ನೇ ತಾರೀಖಿನ ಅಜೆಂಡಾದಲ್ಲಿ ರೈತರಿಗೆ ಸಂಬಂಧಪಟ್ಟ ವಿಷಯವೇ ಇಲ್ಲ. ಅವರ ಗತಿ ಏನು ? ರೈತರ ಬಗ್ಗೆ ಪ್ರಸ್ತಾಪ ಮಾಡದಿರುವುದು ಸರಿಯಲ್ಲ. ನಿನ್ನೆ ಇಟ್ಟಂತಹ ಸಬ್‌ಜಕ್ಟ್ ಇವತ್ತು ಇಲ್ಲ.

(ಗೊಂದಲ)

ಅಧ್ಯಕ್ಷರು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಖಿರ್ಗೆಯವರೆ, ಪಟೇಲರು ಏನು ಹೇಳಿದರು ಅದರ ಬಗ್ಗೆ ಏನು ಹೇಳುತ್ತೀರಿ ಹೇಳಿ. ನಾಗರತ್ನಮ್ಮನವರೇ, ನೀವು ಹೇಳುತ್ತೀರಾ ಹೇಳಿ. ಎಡಿಯೂರಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನೀವು ಎಂಟು ಮಂದಿ ಅವರು ಎಂಟು ಮಂದಿ ನಿಂತರೆ ನಾನು ಏನು ಮಾಡಲಿ. ನಾಗರತ್ನಮ್ಮನವರೇ, ಜೆ. ಹೆಚ್. ಪಟೇಲರು ಏನು ಹೇಳಿದರು ಅದರ ಬಗ್ಗೆ ಹೇಳಿ.